# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–7496/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/01/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಮೋಹನ್ ದೊಂಡಿಬ ಪವಾರ್, ಆಳೂರ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ದೂರುದಾರರಾದ ಶ್ರೀ ಮೋಹನ್ ದೊಂಡಿಬ ಪವಾರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, 2010 ರಿಂದ 2014–15ನೇ ಸಾಲಿನ ವರೆಗೆ ನರೇಗಾ ಯೋಜನೆಯಡಿಯಲ್ಲಿ ಬಿಜಾಪುರದ ಇಂಡಿ ತಾಲ್ಲೂಕಿನ ಆಳೂರ ಗ್ರಾಮ ಪಂಚಾಯತಿ ವತಿಯಿಂದ ಹಲವಾರು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಹಣವನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪ್ರಕರಣದ ಎದುರುದಾರರುಗಳು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು, ಆದ್ದರಿಂದ, ಅವರುಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಅನರ್ಹ ಮತ್ತು ಸರ್ಕಾರಿ ನೌಕರರಿಗೆ ಮನೆ ಹಂಚಿಕೆ ಮಾಡಲಾಗಿರುತ್ತದೆಂದು ತನ್ನ ಮೇಲೆ ಆರೋಪ ಮಾಡಲಾಗಿರುತ್ತದೆ, ಆದರೆ, ತಾನು ಆಳೂರ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ದಿ:23/08/2013 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಆದ್ದರಿಂದ, ಸದರಿ ದೂರು ತನಗೆ ಸಂಬಂಧಿಸಿದ್ದಾಗಿರುವುದಿಲ್ಲ. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಇಂಡಿ ರವರು ದಿ: 15/12/2014 ರಂದು ಶ್ರೀ ಎ.ಕೆ. ಹರಿಜನ ಇವರಿಗೆ ಆಳೂರ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ಎಂದು ನಿಯೋಜಿಸಿದ್ದು, ಸದರಿಯವರಿಗೆ ತಾನು ಆಳೂರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಹುದ್ದೆಯ ಪ್ರಭಾರವನ್ನು ವಹಿಸಿಕೊಟ್ಟಿರುತ್ತೇನೆ. 2010–11 ರಲ್ಲಿ ಶ್ರೀ ಆರ್.ಕೆ. ರಾಠೋಡ ಎನ್ನುವವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುವರು ಎಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, 2ನೇ ಎದುರುದಾರರಾಗಿ ಶ್ರೀ ಆರ್.ಕೆ. ರಾಠೋಡ ರವರನ್ನು ಪ್ರಕರಣಕ್ಕೆ ಅಳವಡಿಸಿಕೊಂಡು ಅವರಿಂದ

ಆಕ್ಷೇಪಣೆಯನ್ನು ಕರೆಯಲಾಗಿದ್ದು, ಶ್ರೀ ರಾಠೋಡ ರವರು ತಮ್ಮ ಆಕ್ಷೇಪಣೆಯಲ್ಲಿ ತಾನು 07/07/2010 ರಂದು ಆಳೂರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪ್ರಭಾರವನ್ನು ವಹಿಸಿಕೊಂಡಿದ್ದು, ದಿ: 02/01/2012 ರವರೆಗೆ ಕೆಲಸ ನಿರ್ವಹಿಸಿರುತ್ತೇನೆ, 2010–11ನೇ ಸಾಲಿನ ಬಸವ ವಸತಿ ಯೋಜನೆ ಫಲಾನುಭವಿಯನ್ನು ದಿ: 12/04/2011 ರಂದು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದ್ದು, ಅಲ್ಲಿ ಯಾವುದೇ ಆಕ್ಷೇಪಣೆ ಬಾರದೆ ಇದ್ದ ಕಾರಣ, ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ಅನುಮೋದನೆ ಮೇರೆಗೆ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ವಸತಿ ನಿಗಮಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿರುತ್ತಾರೆ. ಹಾಗೆಯೇ ನರೇಗಾ ಯೋಜನೆಯಡಿಯಲ್ಲಿ ನಿರ್ವಹಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶ್ರೀ ಎಂ.ಎಂ. ಜುಂಜರ್ಡೆರವರು ಸದರಿ ಕಾಮಗಾರಿಗಳನ್ನು ತನ್ನಿಂದ ಪ್ರಭಾರವಹಿಸಿಕೊಂಡ ನಂತರ ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಸದರಿ ಶ್ರೀ ಜುಂಜರ್ಡೆಯವರನ್ನು ಪ್ರಕರಣದಲ್ಲಿ 3ನೇ ಎದುರುದಾರರನ್ನಾಗಿ ಅಳವಡಿಸಿಕೊಂಡು ಅವರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿಯವರು ತಾವು ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲವೆಂದು ಹಾಗೂ ಆಳೂರ ಗ್ರಾಮ ಪಂಚಾಯತಿಯ ವತಿಯಿಂದ ನಡೆಸಿದ ಕಾಮಗಾರಿಗಳ ಬಗ್ಗೆ ತಾನು ಶ್ರೀ ಆರ್.ಕೆ. ರಾಥೋಡ್ ರವರಿಂದ ಮೌಖಿಕವಾಗಿ ಜವಾಬ್ದಾರಿ ವಹಿಸಿಕೊಂಡಿರುತ್ತೆಂದು, ಆದ್ದರಿಂದ, ತಾನು ಹಣಕಾಸಿನ ವ್ಯವಹಾರಕ್ಕೆ ಹೊಣೆಗಾರನಲ್ಲವೆಂದು ಹಾಗೂ ಈಗ ತಾನು ಪಾರ್ಶ್ವವಾಯು ರೋಗದಿಂದ ಪೀಡಿತನಾಗಿ ಮಾನಸಿಕ ಸ್ಥಿತಿಯು ಸರಿಯಿಲ್ಲವೆಂದು ತಿಳಿಸಿ, ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

3. ಈ ಹಂತದಲ್ಲಿ ಈ ಪ್ರಕರಣದ ತನಿಖೆಯನ್ನು ವಿಜಾಪುರದ ಈ ಸಂಸ್ಥೆಯ ಆರಕ್ಷಕ ಅಧೀಕ್ಷಕರಿಗೆ ವಹಿಸಲಾಗಿದ್ದು, ಸದರಿಯವರು ತನಿಖೆ ಮಾಡಿ ವರದಿ ಸಲ್ಲಿಸಲು ಆರಕ್ಷಕ ನಿರೀಕ್ಷಕರಿಗೆ ವಹಿಸಿರುತ್ತಾರೆ. ಅದರಂತೆ, ಆರಕ್ಷಕ ನಿರೀಕ್ಷಕರು ತಮ್ಮ ತನಿಖಾ ವರದಿಯನ್ನು ಆರಕ್ಷಕ ಅಧೀಕ್ಷಕರ ಮೂಲಕ ಸಲ್ಲಿಸಿದ್ದು, ಸದರಿ ವರದಿಯನ್ನು ಹಾಜರುಪಡಿಸಲಾಗಿದೆ.

4. ಸದರಿ ತನಿಖಾ ವರದಿಯನ್ನು ಪರಿಶೀಲಿಸಲಾಗಿ 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಶ್ರೀಮತಿ ಸುನೀತಾ ರಮೇಶ್ ಪವಾರ್ ಇವರನ್ನು ಫಲಾನುಭವಿಯೆಂದು ಆಯ್ಕೆ ಮಾಡಲಾಗಿದ್ದು, ಇವರಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಲು ಗ್ರಾಮ ಪಂಚಾಯತಿಯಲ್ಲಿ ತಿಳಿಸಲಾಗಿ, ಅವರಿಗೆ ಸಂಬಂಧಿಸಿದ ಕಡತವು ಲಭ್ಯವಿರುವುದಿಲ್ಲವೆಂದು, ಕೇವಲ ಫಲಾನುಭವಿಯ ಆನ್‌ಲೈನ್ ಮಾಹಿತಿಯ ಒಂದು ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪತ್ರದಲ್ಲಿ ಮನೆ ಕಟ್ಟಡ ಕುರಿತು ಒಟ್ಟು ರೂ.74,500/– ಮಂಜೂರಾದ ಬಗ್ಗೆ ಹಾಗೂ ಕೇವಲ 1 ಹಂತದ ನಿರ್ಮಾಣದ ಛಾಯಾಚಿತ್ರ ಇರುವುದು ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ, ಫಲಾನುಭಿಯಾದ ಶ್ರೀಮತಿ ಸುನೀತಾ ಪವಾರ್ ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದು, ಸದರಿಯವರು ತಮ್ಮ ಪತಿಯು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕೆಲಸ

ನಿರ್ವಹಿಸುತ್ತಿರುತ್ತಾರೆಂದು ತಿಳಿಸಿರುತ್ತಾರೆಂದು ಹಾಗೂ ತಾನು ತನ್ನ ಪತಿಯ ಹೆಸರಿನಲ್ಲಿರುವ ಜಾಗದಲ್ಲಿ ಮನೆ ಕಟ್ಟಿಕೊಂಡು ಗ್ರಾಮ ಪಂಚಾಯತಿ ವತಿಯಿಂದ ರೂ.74,000/- ವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಸದರಿಯವರ ಆನ್‌ಲೈನ್ ಮಾಹಿತಿಯನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಸುನಿತಾ ಪವಾರ್ ರವರ ಹೇಳಿಕೆಯನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಶಕುಂತಲಾ ರಾಜಶೇಖರ್ ನಾಯ್ಕ ರವರು 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿದ್ದು, ಇವರಿಗೆ ಸಂಬಂಧಿಸಿದ ದಾಖಲೆಗಳು ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವುದಿಲ್ಲವೆಂದು, ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ತಿಳಿಸಿರುತ್ತಾರೆಂದು, ಆದರೆ, ಆನ್‌ಲೈನ್ ಮಾಹಿತಿ ಲಭ್ಯವಿದ್ದು, ಸದರಿಯವರಿಗೆ ರೂ.74,500/- ಮೊತ್ತದ ಹಣವು ಮಂಜೂರಾಗಿರುವುದು ಕಂಡು ಬರುತ್ತದೆ. ಆದರೆ, ಕೇವಲ ಕಟ್ಟಡ 1 ಹಂತದ ಛಾಯಾಚಿತ್ರ ಮಾತ್ರ ಅಳವಡಿಸಿರುವುದು ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿಯವರ ಆನ್‌ಲೈನ್ ಮಾಹಿತಿಯನ್ನು ಹಾಜರುಪಡಿಸಲಾಗಿದೆ. ಸದರಿ ಶ್ರೀಮತಿ ಶಕುಂತಲಾ ಅವರ ಹೇಳಿಕೆಯನ್ನು ಪಡೆಯಲಾಗಿದ್ದು, ಅದರಲ್ಲಿ ಅವರ ಪತಿಯು ಇಂಡಿ ತಾಲ್ಲೂಕಿನ ನಿಂಬಾಳ ತಾಂಡದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಸದರಿಯವರ ಹೇಳಿಕೆಯನ್ನು ಹಾಜರುಪಡಿಸಲಾಗಿದೆ ಹಾಗೂ ಸದರಿಯವರು ತಮ್ಮ ಹೇಳಿಕೆಯಲ್ಲಿ ತಾನು ಪಂಚಾಯತಿ ವತಿಯಿಂದ ತನಗೆ ರೂ.74,000/- ಮೊತ್ತದ ಹಣ ಮಂಜೂರಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಶ್ರೀಮತಿ ರಮಾ ಬಾಯಿ ಮೋತಿಚಂದ್ ನಾಯ್ಕ ಇವರು 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿದ್ದು, ಇವರಿಗೂ ಸಂಬಂಧಿಸಿದ ದಾಖಲೆಗಳು ಪಂಚಾಯತಿಯಲ್ಲಿ ಲಭ್ಯವಿಲ್ಲವೆಂದು, ಆದರೆ, ಆನ್‌ಲೈನ್ ಮಾಹಿತಿ ಲಭ್ಯವಾಗಿದ್ದು, ಇವರಿಗೆ ಮನೆ ಕಟ್ಟಲು ರೂ.74,500/- ಮಂಜೂರಾಗಿರುವುದು ಕಂಡು ಬರುತ್ತದೆಂದು ತಿಳಿಸಿರುತ್ತಾರೆ. ವಿಚಾರಣಾ ಕಾಲದಲ್ಲಿ ಸದರಿ ಶ್ರೀಮತಿ ರಮಾಬಾಯಿ ರವರು ಹೇಳಿಕೆ ನೀಡಿದ್ದು, ತಮ್ಮ ಪತಿ ಶ್ರೀ ಮೋತಿಚಂದ್ ಇವರು ಗ್ರಾಮ ಸೇವಕರಾಗಿ ಕೆಲಸ ನಿರ್ವಹಿಸುತ್ತಿದ್ದು, 10 ವರ್ಷಗಳ ಹಿಂದೆ ಅವರು ನಿವೃತ್ತಿ ಹೊಂದಿರುತ್ತಾರೆಂದು ಹಾಗೂ ತಮಗೆ ಗ್ರಾಮ ಪಂಚಾಯತಿಯ ವತಿಯಿಂದ ರೂ.54,000/- ಮನೆ ಕಟ್ಟಲು ಮಂಜೂರಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಶ್ರೀಮತಿ ರಮಾಬಾಯಿ ಮೋತಿಚಂದ್ ನಾಯ್ಕ ಇವರ ಆನ್‌ಲೈನ್ ಮಾಹಿತಿಯನ್ನು ಹಾಜರುಪಡಿಸಲಾಗಿದೆ ಹಾಗೂ ಅವರ ಹೇಳಿಕೆಯನ್ನು ಹಾಜರುಪಡಿಸಲಾಗಿದೆ.

6. ನಂತರ ಶ್ರೀಮತಿ ಶಾಲುಬಾಯಿ ರಮೇಶ್ ರಾಥೋಡ್ ಇವರನ್ನು 2010-11ನೇ ಸಾಲಿನ ಬಸವ ವಸತಿ ಯೋಜನೆಯಡಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿದ್ದು, ಇವರಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಲಾಗಿ, ಇವರ ಮನೆಯನ್ನು ಇಂಡಿಯ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ

ಮಾಡಿದ್ದು, ನಮೂನೆ 1 ಸಾಮಾನ್ಯ ಪಾವತಿಯ ಆಸ್ತಿ ಕರ, ಕಟ್ಟಡ ಪರವಾನಗಿ ಸಾಮಾನ್ಯ ಪಾವತಿ ರೂ.50/– ಇ–ಸ್ಟಾಂಪ್ ಖರಾರು ಪತ್ರದ ಪ್ರತಿ ಇರುತ್ತದೆ. ಸದರಿವರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲಾಗಿದೆ. ಅದರಲ್ಲಿ ಕರಾರು ಪತ್ರದ ಪ್ರತಿಯನ್ನು ಅಂದರೆ ನಮೂನೆ–2ಎ ಅನ್ನು ಹಾಜರುಪಡಿಸಿದ್ದು, ಅದು ಖಾಲಿ ಇರುತ್ತದೆ ಮತ್ತು ಇದಕ್ಕೆ ಯಾವುದೇ ಅಧಿಕಾರಿಗಳ ಅಥವಾ ಅರ್ಜಿದಾರರ ಸಹಿ ಇರುವುದಿಲ್ಲ, ವಸತಿ ರಹಿತ ಫಲಾನುಭವಿಗಳ ಪ್ರಮಾಣ ಪತ್ರದಲ್ಲಿ ಕಾರ್ಯದರ್ಶಿಗಳ ಸಹಿ ಇರುವುದಿಲ್ಲ. ಹಾಗೆಯೇ ನಮೂನೆ 10ರಲ್ಲಿ ಚೆಕ್‌ಲಿಸ್ಟ್‌ನಲ್ಲಿ ಯಾವುದೇ ಅಧಿಕಾರಿಗಳ ಸಹಿಯಾಗಲೀ, ಭಾವಚಿತ್ರಗಳಾಗಲೀ ಇರುವುದಿಲ್ಲ. ಕಾಮಗಾರಿಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿಯೂ ಸಹ ಯಾವುದೇ ಅಭಿವೃದ್ಧಿ ಅಧಿಕಾರಿಯ ಸಹಿ ಇರುವುದಿಲ್ಲ. ಸದರಿ ಫಲಾನುಭವಿಯಾದ ಶ್ರೀಮತಿ ಶಾಲುಬಾಯಿರವರ ಆನ್‌ಲೈನ್ ಮಾಹಿತಿಯನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಶಾಲುಬಾಯಿರವರು ಹೇಳಿಕೆ ನೀಡಿದ್ದು, ಅದರಲ್ಲಿ ತನ್ನ ಪತಿಯು ಮಹಾರಾಷ್ಟ್ರದ ಜಥ್ ತಾಲ್ಲೂಕಿನ ಪಿಡಬ್ಲ್ಯೂಡಿ ಕಛೇರಿಯಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದು, ಆತನು ಬೇರೆ ಮದುವೆ ಮಾಡಿಕೊಂಡಿರುತ್ತಾನೆಂದು, ಈಗ ತಾನು ತನ್ನ ತವರು ಮನೆಯವರ ಜಾಗದಲ್ಲಿ ಮನೆ ಕಟ್ಟಿಕೊಂಡಿರುವುದಾಗಿ ತನಗೆ ಪಂಚಾಯತಿ ವತಿಯಿಂದ ರೂ.74,000/– ಮಂಜೂರು ಮಾಡಿರುತ್ತಾರೆ. ಸದರಿಯವರ ಹೇಳಿಕೆಯನ್ನು ಹಾಜರುಪಡಿಸಲಾಗಿದೆ.

7. ಶ್ರೀಮತಿ ಸುಮನಾ ಬಾಯಿ ಅಶೋಕ್ ನಾಯ್ಕ ಇವರನ್ನು ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆ ಮಾಡಲಾಗಿದ್ದು, ಇವರಿಗೆ ಸಂಬಂಧಿಸಿದ ಕಡತಗಳು ಲಭ್ಯವಿರುವುದಿಲ್ಲವೆಂದು ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿ ಶ್ರೀಮತಿ ಸುಮನಾ ಬಾಯಿ ರವರ ಆನ್‌ಲೈನ್ ಮಾಹಿತಿಯನ್ನು ಹಾಜರುಪಡಿಸಲಾಗಿದೆ. ಇವರು ತಮ್ಮ ಹೇಳಿಕೆಯಲ್ಲಿ ತಮ್ಮ ಪತಿಯು 2ನೇ ಬಾರಿ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆಂದು ಹಾಗೂ ತಾವು ರೂ.54,500/– ಅನ್ನು ಪಂಚಾಯತಿ ವತಿಯಿಂದ ತಮಗೆ ಬಿಡುಗಡೆಯಾಗಿರುತ್ತದೆಂದು ತಿಳಿಸಿರುತ್ತಾರೆಂದು ಹಾಗೂ ಮೇಲೆ ತಿಳಿಸಿದ ಫಲಾನುಭವಿಯಾದ ಶ್ರೀಮತಿ ರಮಾಬಾಯಿ ಮೋತಿಚಂದ್ ನಾಯ್ಕ ಇವರು ತನ್ನ ಪತಿಯ ತಾಯಿ ಎಂದು ಹಾಗೂ ಶ್ರೀಮತಿ ಶಕುಂತಲಾ ರಾಜಶೇಖರ್ ನಾಯ್ಕ ರವರು ತನ್ನ ಪತಿಯ ಅಣ್ಣನ ಹೆಂಡಿತಿ ಎಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಶ್ರೀಮತಿ ಸುಮನಾ ಬಾಯಿ ರವರ ಹೇಳಿಕೆಯನ್ನು ಹಾಜರುಪಡಿಸಲಾಗಿದೆ.

8. ತನಿಖಾಧಿಕಾರಿಯವರು ತಾವು ಸ್ಥಾನಿಕವಾಗಿ ಮನೆಗಳನ್ನು ಪರಿಶೀಲಿಸಿದ್ದು, ಆನ್‌ಲೈನ್ ನಲ್ಲಿ ಅಳವಡಿಸಿರುವ ಫೋಟೋಗಳಲ್ಲಿನ ಮನೆಗಳಿಗೂ ಮತ್ತು ಸ್ಥಳದಲಿರುವ ಮನೆಗಳಿಗೂ ವ್ಯತ್ಯಾಸ ಕಂಡು ಬರುತ್ತದೆ ಎಂದು ಹಾಗೂ ಈ ಎಲ್ಲಾ ಮನೆಗಳಿಗೂ 4 ಹಂತದ ಛಾಯಾಚಿತ್ರಗಳು ಇಲ್ಲವೆಂದು ಹಾಗೂ ಸಂಬಂಧಪಟ್ಟ

ದಾಖಲೆಗಳು ಇಲ್ಲವೆಂದು ತಿಳಿಸಿರುತ್ತಾರೆ. ಉಳಿದಂತೆ 2013-14ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿನ ದಾಖಲೆಗಳಲ್ಲಿ ಮಸ್ಟರ್ ರೋಲ್‌ಗಳ ದಾಖಲೆಗಳು ಲಭ್ಯವಿದ್ದು, ಇದರಲ್ಲಿ ನಾಮದೇವ ಸೋಮು ಚೌಹಾಣ್ ಇವರ ಹೊಲದಲ್ಲಿ ಕೃಷಿ ಹೊಂಡ ಕಾಮಗಾರಿ ಬಗ್ಗೆ ಆಳೂರ ಗ್ರಾಮ ಪಂಚಾಯತಿಯಿಂದ ಪಡೆದ ದಾಖಲಾತಿಗಳಲ್ಲಿ ಮಸ್ಟರ್ ರೋಲ್ ನಂ.2764 ರಲ್ಲಿ ಒಟ್ಟು ರೂ.33,325/- ಅನ್ನು ಹಾಗೂ ಮಸ್ಟರ್ ರೋಲ್ ನಂ. 1841 ರಲ್ಲಿ ರೂ.46,655/- ಅನ್ನು ಒಟ್ಟು ವೆಚ್ಚ ಮಾಡಿದ ಬಗ್ಗೆ ಆನ್‌ಲೈನ್ ಎಂ.ಐಎಸ್ ನಿಂದ ತಿಳಿದು ಬರುತ್ತದೆ. ಆದರೆ, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯಲ್ಲಿ ಯಾವುದೇ ಕಡತ ಲಭ್ಯವಿರುವುದಿಲ್ಲ. ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಶ್ರೀ ನಾಮದೇವ ಸೋಮು ಚೌಹಾಣ್ ಇವರ ಹೊಲದಲ್ಲಿ ಯಾವುದೆ ಕೃಷಿ ಹೊಂಡ ಇರುವುದಿಲ್ಲವೆಂದು ಹಾಗೂ ಸದರಿ ಶ್ರೀ ನಾಮದೇವ ಸೋಮು ಚೌಹಾಣ್ ರವರು ಇಂಡಿ ತಾಲ್ಲೂಕಿನ ಹಿರೇಮಸಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿರುವ ಬಗ್ಗೆ ಹಾಗೂ ಅವರ ಪತ್ನಿ ಶ್ರೀಮತಿ ಸುಮನ ರವರು ಇಂಡಿ ತಾಲ್ಲೂಕಿನ ಬತಗುಣಕಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿದುಬಂದಿರುತ್ತದೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸದರಿ ಮಸ್ಟರ್ ರೋಲ್‌ಗಳ ಪ್ರತಿಯನ್ನು ಹಾಜರುಪಡಿಸಲಾಗಿದೆ.

9. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಲ್ಲಿ, ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅರ್ಹರಲ್ಲದ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು ಕಂಡು ಬರುತ್ತದೆ. ಇದಲ್ಲದೇ, ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸ್ವಜನಪಕ್ಷಪಾತ ಮಾಡಿರುವುದು ಸಹ ಕಂಡು ಬಂದಿರುತ್ತದೆ. ಬಡ ಕುಟುಂಬದ ಫಲಾನುಭವಿಗಳನ್ನು ಬಸವ ವಸತಿ ಯೋಜನೆಯಡಿಯಲ್ಲಿ ಆಯ್ಕೆ ಮಾಡದೇ ಇರುವುದು ಹಾಗೂ ಅಂತಹ ಬಡ ಕುಟುಂಬದವರು ಫಲಾನುಭವಿಯಾಗಿ ಆಯ್ಕೆಯಾಗುವಲ್ಲಿ ವಂಚಿತರಾಗಿರುವುದು ಸಹ ಕಂಡು ಬರುತ್ತದೆ. ನರೇಗಾ ಯೋಜನೆಯಡಿಯಲ್ಲೂ ಸಹ ಉಲ್ಲೇಖಿತ ನಿದರ್ಶನದಿಂದ ಕಾಮಗಾರಿಯನ್ನು ಕೈಗೊಳ್ಳದೇ ಹಣವನ್ನು ಬಿಡುಗಡೆ ಮಾಡಿರುವುದು ಕಂಡು ಬರುತ್ತದೆ. ಇದಲ್ಲದೇ, ಫಲಾನುಭವಿಯೆಂದು ಆಯ್ಕೆಯಾಗಿರುವ ವ್ಯಕ್ತಿಯು ಈಗಾಗಲೇ ಸ್ಥಿತಿವಂತನಾಗಿರುವುದು ಸಹ ಕಂಡು ಬರುತ್ತದೆ. ಇದಲ್ಲದೇ, ಗ್ರಾಮ ಪಂಚಾಯತಿ ವತಿಯಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿನ ಫಲಾನುಭವಿಗಳಿಗೆ ಸಂಬಂಧಿಸಿದ ಕಡತಗಳನ್ನು ಹಾಗೂ ನರೇಗ ಯೋಜನೆಯಡಿಯಲ್ಲಿನ ಕಡತಗಳನ್ನು ನಿರ್ವಹಿಸದೇ ಇರುವುದು ಸಹ ಕಂಡು ಬಂದಿರುತ್ತದೆ. ಈ ಎಲ್ಲಾ ಮೇಲಿನ ಕರ್ತವ್ಯದಲ್ಲಿನ ನಿರ್ಲಕ್ಷತನ, ಬೇಜವಾಬ್ದಾರಿತನ ಹಾಗೂ ಹಣದ ದುರುಪಯೋಗಕ್ಕೆ ಸಂಬಂಧಿಸಿದಂತೆ ಶ್ರೀ ಆರ್.ಕೆ. ರಾಠೋಡ, ಶ್ರೀ ಎಂ.ಎಂ. ಜುಂಜರ್ಡೆ ಹಾಗೂ ಶ್ರೀ ಬಿ.ಎಸ್. ಕುಮಟಗಿ ಇವರುಗಳು ಜವಾಬ್ದಾರರೆಂದು ತಿಳಿಸಿದ್ದು, ಇವರುಗಳಲ್ಲಿ ಶ್ರೀ ಆರ್.ಕೆ. ರಾಠೋಡ್ ಮತ್ತು ಶ್ರೀ ಎಲ್.ವಿ.ಜಿದ್ದಿ ಇವರು

ನಿವೃತ್ತರಾಗಿರುತ್ತಾರೆಂದು ಮತ್ತು ಶ್ರೀ ಬಿ.ಎಸ್. ಕುಮಟಗಿ ಇವರುಗಳು ಮೃತರಾಗಿರುತ್ತಾರೆಂದು ಹಾಗೂ ಶ್ರೀ ಎಂ.ಎಂ. ಜುಂಜರ್ಡೆ ರವರು ಕರ್ತವ್ಯದಲ್ಲಿ ಇರುತ್ತಾರೆ ಎಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ.

10. ಪ್ರಕರಣದ ತನಿಖಾ ವರದಿಯಲ್ಲಿ 3ನೇ ಎದುರುದಾರರವರು ಕರ್ತವ್ಯಲೋಪವೆಸಗಿರುತ್ತಾರೆಂದು ಸದರಿಯವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ವರದಿಯನ್ವಯ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿದೆ.

11. ಪ್ರಕರಣದಲ್ಲಿ ಲಭ್ಯವಿರುವ ಮಾಹಿತಿ ಹಾಗೂ ದಾಖಲೆಗಳಿಂದ 2010-11, 2011-12, 2012-13ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಮನೆ ಹಂಚಿಕೆ ಮಾಡುವ ಕಾಮಗಾರಿಯಲ್ಲಿ ವಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ಆಳೂರು ಗ್ರಾಮ ಪಂಚಾಯತಿ ವತಿಯಿಂದ ಮಂಜೂರಾದ ಹಣವನ್ನು ದುರುಪಯೋಗಪಡಿಸಿರುವುದು ಪ್ರಕರಣದ ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **2010-11, 2011-12 ಮತ್ತು 2012-13ನೇ ಸಾಲಿನ ಆಳೂರು ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿ, ಆಡಿಟ್ ವರದಿಯನ್ವಯ ಸಂಬಂಧಪಟ್ಟ ಅಧಿಕಾರಿಗಳಿಂದ ಹಣ ವಸೂಲಿಗೆ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 6/1

(ನ್ಯಾಯಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**